ಇದಾಗಿ ವಾರದ ಮೇಲೆ ಒಂದು ದಿನ ಬೆಳಿಗ್ಗೆ ಹನ್ನೊಂದು ಗಂಟೆಗೆ. ಜೈಲ್ ಸೂಪರಿಂಟೆಂಡೆಂಟ್ ವಜ್ರಂಪೇಟ ವೆಂಕಟೇಶ್ವರುಲು ಕಚೇರಿಗೆ ಬಂದಿದ್ದರು. ಸೆಲ್ಯೂಟ್ ಹೊಡೆದು ಎದುರು ಸೀಟಿನಲ್ಲಿ ಕುಳಿತಿದ್ದರು.

ವೆಂಕಟೇಶ್ವರುಲು ವಜ್ರಗಳ ವ್ಯಾಪಾರದ ಆಗರ್ಭ ಶ್ರೀಮಂತ ಮನೆತನಕ್ಕೆ ಸೇರಿದವರು. ಸಿಕಂದರಾ ಬಾದ್, ವಿಶಾಖಪಟ್ಟಣಂ, ವಿಜಯವಾಡ, ಗುಂಟೂರು, ನೆಲ್ಲೂರು ಮುಂತಾದ ಪ್ರಮುಖ ನಗರಗಳಲ್ಲಿ ವಜ್ರದ ವ್ಯಾಪಾರ ಮಳಿಗೆಗಳನ್ನು ಅವರ ಕುಟುಂಬ ಹೊಂದಿದೆ. ಎಲ್ಲಾ ಪ್ರಮುಖ ರಾಜಕೀಯ ನಾಯಕರೂ ಚುನಾವಣಾ ಸಮಯಗಳಲ್ಲಿ ಫಂಡಿಗಾಗಿ ಅವರ ಮನೆಗೆ ಎಡತಾಕುತ್ತಾರೆ. ಪೂರ್ವ ಗೋದಾವರಿ ಜಿಲ್ಲೆಯಲ್ಲಿರುವ ಅವರ ಸ್ವಂತ ಊರಾದ ವಜ್ರಂಪೇಟದಲ್ಲಿರುವ ಸುಮಾರು ಇನ್ನೂರು ಎಕರೆ ಭತ್ತ ಬೆಳೆಯುವ ಪ್ರದೇಶವನ್ನು ಸುತ್ತಮುತ್ತಲಿನ ಊರಿನ ಭೂಮಿಯಿಲ್ಲದ ಜನರಿಗೆ ಬಿಟ್ಟು ಕೊಟ್ಟಿದ್ದಾರೆ. ಹಾಗಾಗಿ ಅವರ ಕುಟುಂಬವನ್ನು 'ದಾನವಂತಲು' ಎಂಬ ಗುಣವಾಚಕವನ್ನು ಸೇರಿಸಿ ಸಂಬೋಧಿಸುತ್ತಾರೆ. ಇಂಥ ಕುಟುಂಬದ ಎಲ್ಲರೂ ವ್ಯಾಪಾರ, ವ್ಯವಹಾರಗಳಲ್ಲಿ ತೊಡಗಿಕೊಂಡಿದ್ದರೂ ವೆಂಕಟೇಶ್ವರುಲು ಮಾತ್ರ ಪ್ರಿಸನ್ಸ್ ಸರ್ವೀಸ್ ಗೆ ಸೇರಿ ಸದ್ಯಕ್ಕೆ ಸೂಪರಿಂಟೆಂಡೆಂಟ್ ಆಗಿ ಸೇವೆ ಸಲ್ಲಿಸುತ್ತಿದ್ದಾರೆ. ಒಂದಿಷ್ಟು ಅಹಂ ಇಲ್ಲದ ಕರುಣಾಮಯಿ. ಎಷ್ಟೋ ಕೈದಿಗಳ ಕುಟುಂಬದ ಮಕ್ಕಳಿಗೆ ಓದಲು ಲಕ್ಷಾಂತರ ರೂಪಾಯಿ ದಾನ ಮಾಡುತ್ತಾರೆ. ಜೈಲಿನಲ್ಲಿ ವೆಂಕಟೇಶ್ವರುಲು ರೌಂಡ್ಸ್ ಮಾಡುತ್ತಿದ್ದರೆ ಕೈದಿಗಳು 'ಅಪ್ಪ ಅಪ್ಪ' ಎಂದು ಕೈ ಮುಗಿಯುತ್ತಾರೆ.

ರಂಗರಾಜುವಂಥ ಜೈಲರ್, ವೆಂಕಟೇಶ್ವರುಲುವಿನಂಥ ಜೈಲ್ ಸೂಪರಿಂಟೆಂಡೆಂಟ್ ಇರುವುದರಿಂದ ರಂಗರಾವ್ ಪ್ರಿಸನ್ಸ್ ಆಡಳಿತವನ್ನು ಸುಸೂತ್ರವಾಗಿ ನಡೆಸುತ್ತಿರುವುದು. ವೆಂಕಟೇಶ್ವರುಲುರನ್ನು ಕುರಿತು ಮಾಮೂಲಿಯಾಗಿ ನಗುತ್ತಾ ರಂಗರಾವ್, 'ಹೌ ಥಿಂಗ್ಸ್ ಆರ್ ಗೋಯಿಂಗ್ ಆನ್' ಎಂದು ಕೇಳಿದ್ದರು. ಪ್ರತಿಯಾಗಿ ನಗುತ್ತಾ ವೆಂಕಟೇಶ್ವರುಲು 'ಗೋಯಿಂಗ್ ಆನ್ ಫೈನ್ ಸರ್. ಬೈ ದಿ ಬೈ ಈ ಬಾರಿಯ ಸ್ವಾತಂತ್ರ್ಯ ದಿನಾಚರಣೆಗೆ ನಾಡಿನಾದ್ಯಂತ ಎಲ್ಲಾ ಜೈಲುಗಳಲ್ಲಿನ ಸನ್ನಡತೆಯುಳ್ಳ ಎಂಬತ್ತು ಕೈದಿಗಳನ್ನು ಅವರ ಶಿಕ್ಷೆಯ ಅವಧಿಯನ್ನು ಮೊಟಕುಗೊಳಿಸಿ ಬಿಡುಗಡೆ ಮಾಡಲು ಪಟ್ಟಿಯನ್ನು ತಯಾರಿಸಲಾಗಿದೆ. ಅತ್ಯಂತ ಸೂಕ್ಷ್ಮವಾಗಿ ಪರಿಶೀಲಿಸಿ ಪಟ್ಟಿಯನ್ನು ತಯಾರಿಸಲಾಗಿದೆ. ಅಂತಿಮ ಪರಿಶೀಲನೆ ಮತ್ತು ಸಹಿಗಾಗಿ ಪಟ್ಟಿಯನ್ನು ಕೈದಿಗಳ ಫೋಟೊ ಮತ್ತು ವೈಯಕ್ತಿಕ ವಿವರಗಳ ಸಮೇತ ನಿಮಗೆ ಸಲ್ಲಿಸಲಾಗುತ್ತಿದೆ. ಇನ್ನೂ ಎರಡು ತಿಂಗಳು ಸಮಯವಿದೆ ಸರ್. ತಮ್ಮ ಸಹಿಯಾದ ಕೂಡಲೇ ನಾನೇ ಖುದ್ದಾಗಿ ಹೋಗಿ ಹೋಂ ಸೆಕ್ರೆಟರಿ ಮತ್ತು ಬಂಧಿಖಾನೆ ಸಚಿವರ ಸಹಿ ಹಾಕಿಸಿಕೊಂಡು ಬರುತ್ತೇನೆ' ಎಂದು ಫೈಲನ್ನು ಟೇಬಲ್ ಮೇಲಿರಿಸಿ, 'ಮನುಷ್ಯನಿಗೆ ತಪ್ಪು ಮಾಡುವಾಗ ವಿವೇಚನೆ ಇರುವುದಿಲ್ಲ. ನಂತರ ಪಶ್ಚಾತ್ತಾಪ ಹುಟ್ಟುತ್ತದೆ. ಹಸಿವು, ಕಾಮ, ದ್ವೇಷ, ಅಸೂಯೆ, ಪ್ರೀತಿ, ಸ್ವಾರ್ಥ ಮುಂತಾದ Natural instinctಗಳು ಮನುಷ್ಯನನ್ನು ಸಾಮಾಜಿಕ ಮತ್ತು ನೈತಿಕ ಪರಿಮಿತಿಗಳನ್ನು ಮೀರುವಂತೆ ಮಾಡುತ್ತವೆ. ಪ್ರಾಣಿ ಪ್ರಪಂಚದಲ್ಲಿ ಇಲ್ಲದ ಬುದ್ಧಿಮತ್ತೆ, ವಿವೇಚನೆ, ಪ್ರಜ್ಞೆ ಮುಂತಾದ ಗುಣಾತ್ಮಕ ಅಂಶಗಳು ಮನುಷ್ಯನಲ್ಲಿ ಇದ್ದರೂ ಒಮ್ಮೊಮ್ಮೆ Natural instinctಗಳ ಒತ್ತಡ ಮತ್ತು ತೀವ್ರತೆ ಹೆಚ್ಚಾದಾಗ ಮಿದುಳು ಮತ್ತು ಶರೀರಗಳು ತಮ್ಮ ಹತೋಟಿಗಳನ್ನು ಕಳೆದುಕೊಂಡು ಅವನನ್ನು ಅಪರಾಧ ಎಸಗುವಂತೆ ಪ್ರೇರೇಪಿಸುತ್ತದೆ. ನಾನು ವಿಜ್ಞಾನದೊಂದಿಗೆ ಸೈಕಾಲಜಿ, ಹ್ಯೂಮಾನಿಟೀಸ್ ಓದಿಕೊಂಡಿರುವುದರಿಂದ ಮನುಷ್ಯನ ವರ್ತನೆಗಳ ಬಗ್ಗೆ ನನಗೆ ಸದಾ ಆಸಕ್ತಿ ಮತ್ತು ಕುತೂಹಲ. ಕೈದಿಗಳು ಮತ್ತು ಅವರ ಕುಟುಂಬಸ್ಥರನ್ನು ನೋಡಿದಾಗ ಮನ ಕರಗುತ್ತದೆ ಸರ್. ಸದ್ಯ ನಮ್ಮ ಜೈಲುಗಳಲ್ಲಿನ ಕೈದಿಗಳ ಬದುಕನ್ನು ಕಂಡು ಅವರ ಕುಟುಂಬಸ್ಥರು ನೆಮ್ಮದಿಯಿಂದ, ತೃಪ್ತಿಯಿಂದ, ಸಮಾಧಾನದಿಂದ ಹಿಂತಿರುಗುತ್ತಾರೆ. ಇಲ್ಲಿ ಕೆಲಸ ಮಾಡುವ ಪ್ರತಿಯೊಬ್ಬರಿಗೂ ಅದೊಂದು ಹೆಮ್ಮೆಯ, ಪ್ರತಿಷ್ಠೆಯ ವಿಷಯವಾಗಿದೆ ಸರ್. ಇದೆಲ್ಲಾ ಸಾಧ್ಯವಾಗಿರುವುದು ನಿಮ್ಮ ನಿಷ್ಠೆ ಮತ್ತು ಪ್ರಾಮಾಣಿಕತೆಗಳಿಂದಾಗಿಯೇ ಸರ್. ಕಾರ್ಯಕ್ರಮಕ್ಕೆ ಯಾರನ್ನು ಕರೆಸಬೇಕೆಂದು ತಾವು ತೀರ್ಮಾನಿಸಿದರೆ ಆ ದಿಕ್ಕಿನಲ್ಲಿ ನಾವು ಕಾರ್ಯೋನ್ಮುಖರಾಗುತ್ತೇವೆ ಸರ್' ಎಂದು ಸೆಲ್ಯೂಟ್ ಹೊಡೆದು ಚೇಂಬರ್‌ನಿಂದ ಹೊರ ನಡೆದಿದ್ದರು.